ದಿನಾಂಕ 10-03-2026 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

**ಪಾಟೀ ಸವಾಲುಃ  2 ಎದುರುದಾರರ  ಪರವಾಗಿ ಶ್ರೀ ಎಂ. ಆರ್  ವಕೀಲರವರಿಂದಃ**

ನಾನು ಕೊಳಲ ಗಿರಿಯ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದೇನೆ. ಅಪಘಾತವು ದಿಃ 09-02-9-2024 ರಂದು ಆಗಿರುತ್ತದೆ. ಅಪಘಾತವಾದ ದಿನ ನಾನೇ ದ್ವಿ ಚಕ್ರ ವಾಹನವನ್ನು ಚಾಲನೆ ಮಾಡುತ್ತಿದೆನು. ಅಪಘಾತವಾದ ದಿನ ದ್ವಿ ಚಕ್ರ ವಾಹನ ಚಾಲನೆ ಮಾಡಲು  ಡಿ. ಎಲ್ ಇತ್ತು. ಡಿ. ಎಲ್  ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಮಾಡಿರುತ್ತೇನೆ.  ಅಪಘಾತ ವಾಗಿದ್ದ ಸ್ಥಳದಲ್ಲಿ ರಸ್ತೆಯು ನೇರವಾಗಿ ಇತ್ತು. ಅಪಘಾತವಾಗಿದೆ ಎಂದು ಹೇಳುವ ವಾಹನವು ನನ್ನ ವಾಹನದ ಬಲ ಭಾಗಕ್ಕೆ ತಾಗಿತ್ತು. ಅದಿನ ನಾನು ಹೆಲ್ಮಟ್ ಧರಿಸಿದ್ದೆನು. ಅಪಘಾತಕ್ಕೆ ಅಟೋ ಚಾಲಕನ ತಪ್ಪ ಇರುವುದಿಲ್ಲ ಎಂದರೆ ಇರುತ್ತದೆ.

ಅಪಘಾತವಾದ ನಂತರ ಕೆಎಂಸಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ. ಎಲ್ಲಾ ಚಿಕಿತ್ಸೆಯು ಮುಗಿದ ನಂತರ ಕೆಎಂಸಿ ಆಸ್ಪತ್ರೆಯಿಂದ ಬಿಡುಗಡೆಯಾಗಿರುವುದು ಎಂದರೆ ಸರಿ. ಎಲ್ಲಾ ಗಾಯಗಳು ವಾಸಿಯಾಗಿದೆ ಎಂದರೆ ವಾಸಿಯಾಗಿದೆ ನೋವು ಬರುತ್ತದೆ ಚಿಕಿತ್ಸೆ  ಬಾಕಿ ಇರುವುದಿಲ್ಲ ಎಂದರೆ ಹೌದು.  ಅಪಘಾತವಾಗಿದೆ ಎಂದು ಹೇಳುವ ಕಾಲದಲ್ಲಿ ಮಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೆನೆಂದು ತೋರಿಸಲು ದಾಖಲೆ ಇದೆಯೇ ಎಂದರೆ ಸ್ಯಾಲರಿ ಸರ್ಟಿಫಿಕೇಟ್  ಇದೆ.  ನೀವು ಟೆಕ್ನಿಷನ್ ಆಗಿ ಕೆಲಸ ನಿರ್ವಹಿಸಲು ತರಬೇತಿ ಪಡೆದಿರುತ್ತೀರಾ ಎಂದರೆ ಇಲ್ಲ.

ನಿಮಗೆ ಸಂಬಳವನ್ನು ಹೇಗೆ ನೀಡುತ್ತಿದ್ದರು ಎಂದರೆ ಖಾತೆಗೆ ಹಾಕುತ್ತಿದ್ದರು. ನಿಮ್ಮ ಸಂಬಳವು ನಿಮ್ಮ ಖಾತೆಗೆ ಜಮೆ ಆಗುತ್ತಿದ್ದ ಬಗ್ಗೆ ದಾಖಲೆ ಇದೇಯೇ ಎಂದರೆ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ. ನೀವು ಹಾಜರು ಮಾಡಿರುವ ಬಿಲ್ಲುಗಳಿಗೆ ಸಂಬಂದಿಸಿದಂತೆ ವಿಮಾ ಯೋಜನೆ ಅಡಿಯಲ್ಲಿ ಹಣವು ಜಮೆ ಆಗಿರುತ್ತದೆಯೇ ಎಂದರೆ ಇಲ್ಲ. ನಿಪಿ 11 ರಲ್ಲಿ ಇಎಸ್ ಐ ಸೌಲಭ್ಯ ಇದೆ ಎಂದು ನಮೂದು ಇದೆಯೇ ಎಂದರೆ ಹೌದು. ಇ ಎಸ್ ಐ ಸೌಲಭ್ಯ ಪಡೆದುಕೊಂಡಿರುತ್ತೀರ ಎಂದರೆ ಇಲ್ಲ. ನಿಮ್ಮ ಒಳ ರೋಗಿ ಬಿಲ್ಲು ಎಲ್ಲಿ ಇರುತ್ತದೆ ಎಂದರೆ ನಾನು ಒಳ ರೋಗಿಯಾಗಿ ದಾಖಲು ಆಗಿರುವುದಿಲ್ಲ. ಅಪಘಾತಕ್ಕೆ ಸಂಬಂದಿಸಿದಂತೆ ನನ್ನ ತಾಯಿಯವರು ದೂರು ನೀಡಿರುತ್ತಾರೆ.

ಅಪಘಾತವು ನಿಮ್ಮ ತಪ್ಪಿ ದಿಂದ ಅಗಿದ್ದ ಕಾರಣ ಎರಡು ದಿನ ತಡವಾಗಿ ದೂರು ನೀಡಿರುತ್ತೀರಿ ಎಂದರೆ ಸರಿಯಲ್ಲ. ಹೆಚ್ಚಿ ನ ಪರಿಹಾರ ಪಡೆಯುವ ಉದ್ದೇಶದಿಂದ ಹೆಚ್ಚಿನ ಔಷಧಿ ಬಿಲ್ಲುಗಳನ್ನು ಹಾಜರು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಈಗ ನಿಮಗೆ ಎಷ್ಟು ಸಂಬಳ ಇದೆ ಎಂದರೆ ಒಟ್ಟು 15 ಸಾವಿರ ಬರುತ್ತದೆ. ಅವುಗಳಲ್ಲಿ ಇಎಸ್ ಐ, ಫಿಎಫ್ , ಎಲ್ಲವೂ ಕಡಿತವಾಗಿ ಕೈ 13 ಸಾವಿರ ಬರುತ್ತದೆ.

ಅಪಘಾತ ದಿಂದ ನಿಮಗೆ ಯಾವುದೇ ಆದಾಯ ನಷ್ಟ ಅಗಿರುವುದಿಲ್ಲ ಎಂದರೆ ಆಗಿರುತ್ತದೆ. ನಿಪಿ 11 ನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿ ಹಾಜರು ಮಾಡಿರುತ್ತೀರಿ ಎಂದರೆ

ಇಲ್ಲ. ನಿಮ್ಮ ಅರ್ಜಿ ಮತ್ತು ಮುಖ್ಯ ವಿಚರಣೆಯಲ್ಲಿ ಹೇಳಿರುವಂತೆ ಔಷಧಿ, ಆಸ್ಪತ್ರೆ ಓಡಾಟ, ಪರಿಚಾರಕರ ಸಂಭಾವನೆಗೆ ಅಷ್ಟು ಹಣವು ಖರ್ಚು ಆಗಿರುವುದಿಲ್ಲ ಎಂದರೆ



ಸರಿಯಲ್ಲ. ಅಪಘಾತವು ನಿಮ್ಮ ತಪ್ಪಿನಿಂದಲೇ ಆಗಿರುವುದರಿಂದ 2 ನೇ ಎದ್ರುದಾರರು ಪರಿಹಾರದ ಹಣವನ್ನು ತುಂಬಿ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ. ಉಡುಪಿ.